ಆಯಾ ಡಾಕ್ಟರರಿಗೆ ಬಂದು ತಲುಪುತ್ತದೆ. ಅದು ನಿಮಗೆ ಗೊತ್ತಾಗುವುದೇ ಇಲ್ಲ. ಆದ್ದರಿಂದಲೇ ಡಾಕ್ಟರರು, ಇಂಥದೇ ಪ್ರಯೋಗಾಲಯಕ್ಕೆ ಹೋಗಿ, ಅಲ್ಲಿ ಚೆನ್ನಾಗಿ ಪರೀಕ್ಷೆ ಮಾಡುತ್ತಾರೆ ಎಂದು ಶಿಫಾರಸ್ಸು ಮಾಡುತ್ತಾರೆ. ಏಕೆಂದರೆ ಅವರ ನೇರ ಸಂಪರ್ಕ ನಮಗಿರುತ್ತದೆ. ಒಂದು ವೇಳೆ ಇಂಥದೊಂದು ಅನುಮಾನ ನಿಮಗೆ ಬಂದು ಬೇರೆ ಕಡೆ ಮಾಡಿಸುತ್ತೇವೆಂದರೂ, ಎಲ್ಲಾದರೂ ಮಾಡಿಸಿ ಪರವಾಗಿಲ್ಲ ಎಂದು ಹೇಳುತ್ತೇವೆ. ಎಲ್ಲೇ ಮಾಡಿಸಿದರೂ ನಾವು ಬರೆದುಕೊಟ್ಟ ಚೀಟಿಯಲ್ಲಿ ನಮ್ಮ ಹೆಸರು, ಫೋನ್ ನಂಬರು ಇರುತ್ತಲ್ಲವೇ. ಲ್ಯಾಬೊರೇಟರಿಯವರು ಅದನ್ನು ನೋಟ್ ಮಾಡಿಕೊಂಡಿರುತ್ತಾರೆ. ಇಲ್ಲವೇ ರಿಪೋರ್ಟ್ ಅನ್ನು ತೋರಿಸಲು ನೀವಾದರೂ ಬಂದೇ ಬರುತ್ತೀರಲ್ಲವಾ, ಅವಾಗ ಅದು ಡಾಕ್ಟರರಿಗೆ ಗೊತ್ತಾಗಿ ರಿಮ್ಯೆಂಡ್ ಮಾಡುತ್ತಾರೆ...' ಎಂದು ವಿಶದವಾಗಿ ವಿವರಿಸಿದ. ಮೆಡಿಸನ್ ಮಾಫಿಯಾದವರು ಒಳಗೊಳಗೇ 'ಇವನೂ ತಿನ್ನಲ್ಲ, ನಮಗೂ ತಿನ್ನಕ್ಕೆ ಬಿಡಲ್ಲ, ದರಿದ್ರ ನನ್ಮಗ... ಅವರ ತಾತನ ಕಾಲದಿಂದಲೂ ಅವರ ವಂಶದೋರೆಲ್ಲ ಬರೀ ಪ್ರಾಮಾಣಿಕತೆ ಅಂತ ಹೇಳ್ಕೊಂಡು ಬರ್ತಲೇ ಇದ್ದಾರೆ... ಆದ್ರೆ ಜನ್ರನ್ನ ಏನು ಉದ್ಧಾರ ಮಾಡಿದ್ರು...' ಎಂದು ಗೊಣಗುತ್ತಿದ್ದುದನ್ನು ಬಿಟ್ಟರೆ ಇನ್ನೇನು ತಾನೇ ಮಾಡಲು ಸಾಧ್ಯವಾಗಿತ್ತು.

ಆದರೆ ಅಶೋಕಪ್ಪ ತನ್ನ ಕ್ಲಿನಿಕ್ಕಿನಲ್ಲಿ ಮಾತ್ರ ತನ್ನ ತಂದೆ, ತಾತನ ಆದರ್ಶವನ್ನೇ ಪಾಲಿಸುತ್ತಿದ್ದ. ಯಾರಿಂದಲೂ ಫೀಸನ್ನು ಪಡೆಯುತ್ತಿರಲಿಲ್ಲ. ಹಾಗಂತ ಸುಮ್ಮನಿರಲೂ ಸಾಧ್ಯವಿರಲಿಲ್ಲ. ಏಕೆಂದರೆ ಕಟ್ಟಡದ ಬಾಡಿಗೆ, ವಿದ್ಯುತ್ ಬಿಲ್ಲು, ನೀರಿನ ಬಿಲ್ಲು, ಅಸಿಸ್ಟೆಂಟ್‌ಗಳ ಸಂಬಳ ಎಲ್ಲ ನಡೆಯಬೇಕಿತ್ತಲ್ಲ. ಅದಕ್ಕೆ ತಮಗೆ ಕಾಣದ ಆ ಕಡೆ ಮೂಲೆಯಲ್ಲೊಂದು ಟ್ರಾನ್ಸಪರೆಂಟ್ ಆದ ಡಬ್ಬಿಯೊಂದನ್ನು ಇಟ್ಟಿದ್ದ. ಸಲಹೆ ಚೀಟಿಯನ್ನು ಬರೆದುಕೊಟ್ಟಾದ ಮೇಲೂ ಇವರು ಫೀಸು ಕೇಳದಾದಾಗ ಪಾಪ, ಮರೆತುಬಿಟ್ಟರೇನೋ ಎಂದು ರೋಗಿಯ ಕಡೆಯವರೇ 'ಡಾಕ್ಟರೇ, ಫೀಸು ಎಷ್ಟು?' ಎಂದು ಕೇಳಿದರೆ ಮಾತ್ರ ಆ ಡಬ್ಬಿಯನ್ನು ತೋರಿಸಿ, 'ನಿಮ್ಮ ಪ್ರೀತಿ...' ಎಂದು ಹೇಳಿ ಅವರು ಹಾಕಿದರೋ, ಬಿಟ್ಟರೋ; ಕಾಯಿನ್ನನ್ನು ಹಾಕಿದರೋ, ನೋಟನ್ನು ಹಾಕಿದರೋ ಎಂಬುದನ್ನೂ ನೋಡದೇ ಎದ್ದುಬಿಡುತ್ತಿದ್ದರು. ಎಷ್ಟೋ ಜನರಿಗೆ ಅವರ ಆ ನಿಷ್ಕಲ್ಮಶ ಸೇವೆ ಇಷ್ಟವಾಗಿ ಅವರು ಕೇಳಿದರೆ ಕೊಡುತ್ತಿದ್ದುದಕ್ಕಿಂತಲೂ ಜಾಸ್ತಿಯೇ ಹಾಕಿ ಹೋಗುತ್ತಿದ್ದರು. ಇದನ್ನರಿತ ಸಮಕಾಲೀನ ಡಾಕ್ಟರರುಗಳು 'ಕೇಳಿದ್ರೆ ಬೇರೆ ಡಾಕ್ಟರರಿಗಿಂತ ಜಾಸ್ತಿ ಆಯ್ತು ಅಂತಾರೆ ಅಂತ ಈ ನಾಟ್ಕ ಮಾಡ್ತಾನೆ... ಅಲ್ಲದೆ ಯಾರಿಗೂ ಹಂಗೇ ಹೋಗಕ್ಕೆ ಮನಸ್ಸು ಬರಲ್ಲ. ಯಾರೂ ಎದುರಿಗೆ ಇರದಿದ್ರೆ ಚಿಲ್ಲರೇನ ವಾಪಸ್ಸು ಕೇಳೋ ಪ್ರಮೇಯನೂ ಇರಲ್ಲ. ಹಂಗಾಗಿ ಎಲ್ಲ ಬಂಧಾನೇ ಡಬ್ಬಕೆ ಬೀಳ್ತಾವೆ...' ಎಂದು ಕಾಲೆಳೆಯುತ್ತಿದ್ದರು. ಯಾರಾದರೂ, 'ನೀವೂ ಹಂಗೇ ಮಾಡಬಹುದಲ್ವ?' ಅಂದರೆ, 'ಬಡ್ಡಿಮಕ್ಳು ಜನ ಸರಿಯಿಲ್ಲಾರೀ... ಸಿಕ್ಕಿದ್ದೇ ಲಾಭ ಅಂತ ಹಂಗೇ ಹೊಂಟೋಗ್ತಾರೆ...' ಎನ್ನುತ್ತಿದ್ದರು. 'ನಿಮಗೆ ಕೊಡದವರು ಅವರಿಗೆ ಹೆಂಗೆ ಕೊಡ್ತಾರೆ?' ಅಂದರೆ, 'ಅದೇನು ಮೋಡಿ ಮಾಡ್ತಾನೋಪ್ಪ, ಗೊತ್ತೇ ಆಗಲ್ಲ...' ಎಂದು ಜಾರಿಕೊಂಡುಬಿಡುತ್ತಿದ್ದರು.

ಆದರೆ ಇದಕ್ಕೆಲ್ಲ ಅಶೋಕಪ್ಪ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. 'ನೋಡ್ರೀ... ನಾವು ಸಮುದ್ರದ ದಂಡೇಲಿ ಉರುಳಾಡಿದ್ರೂ ನಮ್ಮ ಮೈಗೆ ಎಷ್ಟು ಅಂಟಬೇಕೋ ಅಷ್ಟೇ ಮರಳು ಅಂಟೋದು. ಒಂದು ಕಾಳನ್ನೂ ಜಾಸ್ತಿ ಅಂಟುಸ್ಕಳಕ್ಕಾಗಲ್ಲ. ಹಂಗಾಗಿ ನಮಗೆ ಎಷ್ಟು ದಕ್ಕಬೇಕೋ ಅಷ್ಟು ದಕ್ಕುತ್ತೆ. ನಮಗೆ ಸೇರ್ಬೇಕು ಅಂತ ಇದ್ರೆ ಮಲಿಕ್ಕಂಡಿದ್ರೂ ಹುಡುಕಿಕೊಂಡು ಬಂದು ಸೇರ್ತದೆ. ಬರಬಾರದು ಅಂತ ಇದ್ರೆ ಬೆನ್ನತ್ತಿ ಹೋದರೂ ಕೈಗೆ ಸಿಗುವುದಿಲ್ಲ. ಮರೀಚಿಕೆ ಥರ ಓಡ್ತಾ ಇರ್ತದೆ. ಅದಕ್ಕೆ ಯಾಕೆ ಚಿಂತೆ ಮಾಡ್ಬೇಕು' ಎಂದು ವೇದಾಂತದ ಮಾತಾಡುತ್ತಿದ್ದ.

ಮತ್ತೆ ಎಲ್ಲಿಗೋ ಹೋದೆ ನೋಡಿ. ಡಾ. ಪ್ರಶಾಂತ ನಾಯಕನ ಬಗ್ಗೆ ಮಾತಾಡುತ್ತಿದ್ದೆನಲ್ಲ... ಆತನಿಗೆ ನನ್ನ ಸಂವೇದನೆಗಳನ್ನು ಓದಲು, ಡಿಕೋಡಿಂಗ್ ಮಾಡಲು ಸಾಧ್ಯವಾಗದೇ, ನನ್ನ ಸುತ್ತಳತೆ ಎಷ್ಟು, ನನ್ನ ಎತ್ತರವೆಷ್ಟು, ನನ್ನ ಮುಖ್ಯ ಬೇರುಗಳು ಹರಡಿಕೊಂಡಿರುವ ದಿಕ್ಕು ಮತ್ತು ಅದರ ಗಾತ್ರವೆಷ್ಟು, ತಾಯಿ ಬೇರಿನ ಗಾತ್ರವೆಷ್ಟು ಎಂಬಿತ್ಯಾದಿ ಭೌತಿಕ ಅಂಶಗಳನ್ನಷ್ಟೇ ಸಂಗ್ರಹಿಸಿಕೊಂಡು ಮನೆಗೆ ಹೋಗಿ ವರದಿ ತಯಾರಿಸಿ ಮೇಲ್ ಮಾಡಿಬಿಟ್ಟ.

ಕೊಂಬೆ 14

ತಗೋ, ಅದಾಗಿ ಹದಿನೈದು ದಿನಗಳಿಗೆಲ್ಲ ದೊಡ್ಡ ದೊಡ್ಡ ಕ್ರೇನುಗಳು, ಜೆಸಿಬಿಗಳು, ಹಿಟಾಚಿಗಳು ನನ್ನನ್ನು ಆಕ್ರಮಿಸಿಕೊಂಡು ಬಂದು ನಿಂತವು. ಮೊದಮೊದಲು ಹಿಂದಿನಂತೆ ದಣಿವಾರಿಸಿಕೊಳ್ಳಲು ನನ್ನ ನೆರಳಿನಲ್ಲಿ ಬಂದು ನಿಂತುಕೊಂಡಿದ್ದಾವೆಂದು ಅನ್ನಿಸಿದರೂ, ಅವುಗಳ ಸಂಖ್ಯೆ ಜಾಸ್ತಿಯಾದಾಗ ನನ್ನ ತಿಳಿವಳಿಕೆ ಜಾಗೃತವಾಯಿತು. ದೊಡ್ಡದೊಡ್ಡ ಲಾರಿಗಳು ನನ್ನ ಬುಡಕ್ಕೆ ಕುಂಡಿ ಆನಿಸಿ, ಹಿಂಗೆ ಕಡಿದ ರೆಂಬೆಕೊಂಬೆಗಳನ್ನು ಹಂಗೇ ಹೇರಿಕೊಂಡು ಹೋಗಲು ತಯಾರಾಗಿ ನಿಂತಿದ್ದವು. ಯುದ್ಧ ಭೂಮಿಯಲ್ಲಿ ಸನ್ನದ್ಧರಾಗಿ ನಿಂತ ಗಜಪಡೆ, ಅಶ್ವಪಡೆ, ಕಾಲಾಳು ಸೈನಿಕರಂತೆ ಎಲ್ಲ ಬಂದು ನಿಂತಿದ್ದರು. ಅವರುಗಳಿಗೆ ಆದೇಶ ನೀಡಲು ರಥದ ಮೇಲಿಂದ ರಾಜನೊಬ್ಬ ಬರಬೇಕಿತ್ತಷ್ಟೇ. ಆ ರಥದ ಮೆರವಣಿಗೆಯಲ್ಲಿ ಮುಖ್ಯಮಂತ್ರಿಯೇ ಬರುತ್ತಾರೋ, ಲೋಕೋಪಯೋಗಿ ಮಂತ್ರಿ ಬರುತ್ತಾರೋ, ಮುಖ್ಯ ಇಂಜಿನಿಯರ್ ಬರುತ್ತಾರೋ ಯಾರಿಗೆ ಗೊತ್ತು?.

ಇಷ್ಟು ಹೊತ್ತು ನಾನು ಯಾವುದೇ ತಲ್ಲಣಗಳಿಲ್ಲದಂತೆ ತಣ್ಣಗೆ ವರ್ತಿಸುತ್ತಿದ್ದರೂ ಯಾವುದೇ ಕ್ಷಣದಲ್ಲಿ ನನ್ನ ಬುಡಕ್ಕೆ ಯಾಂತ್ರಿಕ ಗರಗಸದ ಬ್ಲೇಡು ತಗುಲಿಬಿಡಬಹುದೆಂಬುದು ಮನವರಿಕೆಯಾಯಿತೋ ಆಗ ನನ್ನ ತಳಮಳ ಜಾಸ್ತಿಯಾಯಿತು. ನನ್ನೂರಿನ ಮಗ ಮುಖ್ಯಮಂತ್ರಿಯಾಗಿದ್ದಾನೆ ಎಂದು ಬೀಗುತ್ತಿದ್ದ ನನಗೆ ಯಾಕೋ ಆತನೂ ಈ ಷಡ್ಯಂತ್ರದಲ್ಲಿ ಸೇರಿಕೊಂಡಿದ್ದಾನೇನೋ ಅನ್ನಿಸಲಾರಂಭಿಸಿತು. ಪಾಪ ಆತ ಅಂಥವನಲ್ಲ, ಆದರೆ ಯಾವುದೋ ಒತ್ತಡಕ್ಕೆ ಒಳಗಾಗಿ ಒದ್ದಾಡುತ್ತಿರಬಹುದೇನೋ ಅನ್ನಿಸದಿರಲಿಲ್ಲ.

'ಅಟ್ಯಾಕ್...' ಎಂದು ಹೇಳುವ ಕಮ್ಯಾಂಡರ್ ಇನ್ನೂ ಬರುವ ಮೊದಲೇ ಪೊಲೀಸರೂ ಸೇರಿಕೊಂಡರು. ಬಲಗೈಯಲ್ಲಿ ಲಾಠಿ, ಎಡಗೈಯಲ್ಲಿ ಕಲ್ಲುಗಳಿಂದ ರಕ್ಷಿಸುವಂಥ ಪಾರದರ್ಶಕವಾದ ಆದರೆ ಗಟ್ಟಿಯಾದ ಗುರಾಣಿಯಂಥ ಪಾಲಿಕಾರ್ಬೋನೇಟ್ ಶೀಲ್ಡ್‌ಗಳು, ನಾಲ್ಕೈದು ಫೈರ್ ಇಂಜಿನ್‌ಗಳು, ಆಂಬುಲೆನ್ಸ್‌ಗಳು, ಟಿಯರ್ ಗ್ಯಾಸ್ ವೆಹಿಕಲ್, ಹೀಗೆ ಎಲ್ಲವೂ ಬಂದು ನಿಂತವು. ಪೊಲೀಸರು ನಾಲ್ಕೈದು ಗುಂಪುಗಳಲ್ಲಿ ಗಸ್ತಿನಲ್ಲಿ ಬಂದು ನಿಂತರು!.

ಇದೇನಾಗುತ್ತಿದೆ ಇಲ್ಲಿ ಎಂಬುದನ್ನು ಅರಿಯಲು ಜನಗಳಿಗೆ ತಡವಾಗಲಿಲ್ಲ. ಎಲ್ಲರ ಕೈಯಲ್ಲಿರುವ ಸ್ಮಾರ್ಟ್ ಫೋನುಗಳಲ್ಲಿ ನನ್ನ ಸುತ್ತ ನಿಂತಿರುವ ಪೊಲೀಸ್ ವ್ಯಾನ್‌ಗಳು, ಅರ್ಥ್ ಮೂವಿಂಗ್ ಎಕ್ವಿಪ್‌ಮೆಂಟುಗಳು, ಲಾರಿಗಳ ಜೊತೆಗೆ ಲೆಫ್ಟ್‌ರೈಟ್ ಹೇಳುತ್ತ ಮಾರ್ಚ್‌ಫಾಸ್ಟ್ ಮಾಡುತ್ತಿರುವ ಪೇದೆಗಳ ಚಿತ್ರಗಳು ಸಾವಿರಾರು ಸಂಖ್ಯೆಯಲ್ಲಿ ಕ್ಲಿಕ್‌ಗೊಂಡವು. ಕೆಲವು ಮೊಬೈಲ್‌ಗಳ ಫ್ಲಾಶ್ ಲೈಟ್ ಸಹ ನನ್ನ ಮೇಲೆ ಬೆಳಕು ಚೆಲ್ಲಿದವು. ನನ್ನ ಎಲೆಗಳು ಧಾವಂತದಿಂದ ಪಟಪಟನೆ ಸದ್ದು ಮಾಡುತ್ತ ಇನ್ನೇನು ಜೀವವೇ ಹೋಗಿಬಿಟ್ಟಿತು ಎನ್ನುವಂತೆ ಚಡಪಡಿಸುತ್ತಿದ್ದವು. ಬೆಳಬೆಳಗ್ಗೆಯೇ ದಾಹ ದಾಹ ಎನ್ನುವಂತೆ ಕಾಡುತ್ತಿದ್ದ ಅವುಗಳಿಗೆ ಬೇರಿನಿಂದ ಇನ್ನಷ್ಟು ಹೆಚ್ಚು ನೀರನ್ನು ಸರಬರಾಜು ಮಾಡಿದೆ. ಅವುಗಳು ಬಿಸಿಲಿಗೆ ನರಚಿಕೊಂಡವುಗಳಂತೆ ಮೇಲಿಂದ ಮೇಲೆ ನೀರು ಕುಡಿದು ದಣಿವಾರಿಸಿಕೊಂಡವು.

ಅದೆಲ್ಲಿದ್ದರೋ ಜನ, ಕುತೂಹಲದಿಂದ ನನ್ನತ್ತ ಬರಲಾರಂಭಿಸಿದರು. ಇವರಲ್ಲಿ ನನ್ನನ್ನು ಉಳಿಸಬೇಕೆಂಬ ಕಾಳಜಿಯಲ್ಲಿ ಯಾರೂ ಇರಲಿಲ್ಲ. ಆದರೆ ಏನೋ ಚಿತ್ರೀಕರಣ ನಡೆಯುತ್ತಿರಬಹುದೆಂದು, ಅದನ್ನು ಮೊಬೈಲಿನಲ್ಲಿ ಚಿತ್ರೀಕರಿಸಿಕೊಳ್ಳಲು ಬಂದವರಂತಿದ್ದರು. ಕ್ರಮೇಣ ಸುದ್ದಿ ಊರನ್ನೆಲ್ಲ ಆವರಿಸಿತು.

ಪೊಲೀಸರು ಲಾಠಿಯನ್ನು ನೆಲಕ್ಕೆ ಕುಟ್ಟುತ್ತ, ಹಿಂದೆ ಹೋಗಿ, ಹಿಂದೆ ಹೋಗಿ ಎಂದು ಗದರುತ್ತಿದ್ದರು. ಮಂತ್ರಿಗಳು ಬಂದರು ದಾರಿಬಿಡಿ ಎಂದು ಕೆಲವರೆಂದರೆ, ಸಾಹೇಬರು ಬಂದರು ದಾರಿಬಿಡಿ ದಾರಿಬಿಡಿ ಎಂದು ಪೊಲೀಸರು ತಮ್ಮ ಸಾಹೇಬನ ಮುಖದಲ್ಲಿನ ಮುಗುಳುನಗೆಯೊಂದು ತಮ್ಮ ಮೇಲೆ ಬಿದ್ದರೆ ಸಾಕು ಎಂಬಂತೆ ಬಂದೋಬಸ್ತ್ ಮಾಡುತ್ತಿದ್ದರು.

ಲೋಕೋಪಯೋಗಿ ಮಂತ್ರಿಗಳು ಫ್ಲೈಓವರ್ ನಿರ್ಮಾಣಕ್ಕೆ ಶಂಕುಸ್ಥಾಪನೆಯನ್ನು ಮಾಡಲು ಬಂದಿದ್ದರು. ನನ್ನ ಬುಡದಲ್ಲಿಯೇ ಶಿಲಾನ್ಯಾಸಕ್ಕೆ ಏರ್ಪಾಡು ಮಾಡಿದ್ದರು. ಆದರೆ ಯಾರಿಗೂ ನನ್ನ ಬುಡಮೇಲು ಕೃತ್ಯ ನಡೆಯಬಹುದೆಂಬುದರ